ತಿಂಡಿಗಳನ್ನು ತಯಾರಿಸಿ ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಅನಧಿಕೃತವಾಗಿ ನಡೆಯುವ ಹೋಟೆಲ್‌ಗಳ ಹಾಗೂ ತಿಂಡಿ ತಿನಿಸುಗಳನ್ನು ತಯಾರಿಸಿ ಮಾರುವವರ ಮೇಲೆ ಪಾಲಿಕೆ ಏನೇನು ಕ್ರಮ ಜರುಗಿಸಿದೆ (ಸಂಪೂರ್ಣ ವಿವರ ನೀಡುವುದು)?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಆ ಸಂಬಂಧದ ವಿವರ ಈ ಕೆಳಗಿನಂತಿದೆ:–

ಕ್ರ.ಸಂ.	ಅಂಶ ((item)	ಒಟ್ಟು
1	ಕ್ಯಾಟ್ರಿಂಗ್‌ಗಳು	105
2	ಬಾರ್ & ರೆಸ್ಟೋರೆಂಟ್	63
3	ಹೋಟೆಲ್	68
4	ಫಾಸ್ಟ್‌ಫುಡ್	131
5	ಕ್ಯಾಂಟೀನ್	321

ಆ) ಬಂದಿದೆ.

ಇ) ಅಂತಹ ಹೋಟೆಲು ಹಾಗೂ ತಿಂಡಿ ತಿನಿಸು ತಯಾರಿಸುವವರ ವಿರುದ್ಧ ನಿಯಮಗಳನ್ವಯ ಕ್ರಮ ವಹಿಸಲಾಗುತ್ತಿದೆ.

ಆರ್.ಐ.ಡಿ.ಎಫ್. ಯೋಜನೆ

1298(1590); ಶ್ರೀ: ಮಕಬುಲ್ ಎಸ್ ಬಾಗವಾನ್ (ಬಿಜಾಪುರ ನಗರ)

ಅ) 2013–14ನೇ ಸಾಲಿನಲ್ಲಿ ಆರ್.ಐ.ಡಿ.ಎಫ್ ಯೋಜನೆಯಡಿಯಲ್ಲಿ ಪಶುವೈದ್ಯಕೀಯ ಕಟ್ಟಡ ನಿರ್ಮಾಣಕ್ಕೆ ಬಿಜಾಪುರ ಜಿಲ್ಲೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;

ಆ) ಈ ಯೋಜನೆಯಡಿಯಲ್ಲಿ ಪಶುವೈದ್ಯಕೀಯ ಕಟ್ಟಡ ಕಾಮಗಾರಿಗೆ ಇಲಾಖೆಯಿಂದ ಎಷ್ಟು ಪ್ರಸ್ತಾವನೆಗಳು ಬಂದಿವೆ;

ಇ) ಬಿಜಾಪುರ ನಗರ ಕ್ಷೇತ್ರದಲ್ಲಿ ಎಷ್ಟು ಪಶುವೈದ್ಯಕೀಯ ಕಟ್ಟಡ ಶಿಥಿಲಗೊಂಡಿರುತ್ತವೆ ಮತ್ತು ಹೊಸ ಕಟ್ಟಡಗಳೆಷ್ಟಿವೆ; (ಕ್ಷೇತ್ರವಾರು ಮಾಹಿತಿ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು)

ಅ) 2013–14ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಗೆ ಆರ್.ಐ.ಡಿ.ಎಫ್–19 ರ ಯೋಜನೆಯಡಿಯಲ್ಲಿ ಒಟ್ಟು ಆರು ಸಂಸ್ಥೆಗಳಲ್ಲಿ ನೂತನ ಪಶು ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲು ಪ್ರತಿ ಕಟ್ಟಡಕ್ಕೆ ₹ 26.46 ರಂತೆ ಒಟ್ಟು ₹ 158.76 ಲಕ್ಷಗಳಲ್ಲಿ ನಿರ್ಮಿಸಲು ಯೋಜನೆ ಹಮ್ಮಿಕೊಳ್ಳಲಾಗಿದ್ದು, ಈ ಕುರಿತು ನಬಾರ್ಡ್ ಸಂಸ್ಥೆಯಿಂದ ಮಂಜೂರಾತಿಯನ್ನು ಕೋರಲಾಗಿದೆ. ಮಂಜೂರಾತಿ ದೊರೆತ ನಂತರ ಕೂಡಲೇ ನಿರ್ಮಾಣ ಸಂಸ್ಥೆಗೆ ಹಣ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಆ) 2013–14ನೇ ಸಾಲಿನಲ್ಲಿ ಆರ್.ಐ.ಡಿ.ಎಫ್–19 ರ ಕಟ್ಟಡ ಕಾಮಗಾರಿಗಳಿಗಾಗಿ ಪಶುಪಾಲನಾ ಇಲಾಖೆಯಿಂದ 204 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, 127 ಪ್ರಸ್ತಾವನೆಗಳು ಮಂಜೂರಾಗಿರುತ್ತವೆ.

ಇ) ಬಿಜಾಪುರ ನಗರ ಕ್ಷೇತ್ರದಲ್ಲಿ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರ ಕಛೇರಿಯ ಆವರಣದಲ್ಲಿರುವ ಜೀಪ್ ಶೆಡ್ ಶಿಥಿಲಗೊಂಡಿದ್ದು, 2013–14ನೇ ಕ್ರಿಯಾ ಯೋಜನೆಯಲ್ಲಿ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸಲಾಗುವುದು. ಎಸ್.ಜಿ.ಎಸ್.ವೈ ಯೋಜನೆಯಡಿ ಮಂಜೂರಾದ ರೋಗ ತನಿಖಾ ಪ್ರಯೋಗಾಲಯಕ್ಕೆ ಹೊಸ ಕಟ್ಟಡವಿರುತ್ತದೆ